# ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ


Office of
The Asst. Executive Engineer(Ele)
O&M Sub Division, GESCOM
Hagaribommanahalli

ರವರ ಕಛೇರಿ
ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನ ಉಪ-ವಿಭಾಗ
ಗು.ವಿ.ಸ.ಕಂ.ನಿ. ಹಗರಿಬೊಮ್ಮನಹಳ್ಳಿ

ದೂರವಾಣಿ: 08397-238474
ಈ-ಮೇಲ್: aeehbhalli.gescom@gmail.com


ಸಂಖ್ಯೆ:ಸಕಾನಿಅ(ವಿ)/ಸ.ಅ.(ತಾ)/ಹ.ಬೊ.ಹಳ್ಳಿ/2021-22/ 3207-08 16/12/2021

ಗೆ,

ಕಾರ್ಯ ನಿರ್ವಾಹಕ ಅಭಿಯಂತರರು (ವಿ)
ಕಾರ್ಯ ಮತ್ತು ಪಾಲನಾ ಗ್ರಾಮೀಣ ವಿಭಾಗ ಕಛೇರಿ
ಗು.ವಿ.ಸ.ಕಂ.ನಿ. ಹಗರಿಬೊಮ್ಮನಹಳ್ಳಿ

ಮಾನ್ಯರೇ.

**ವಿಷಯ :-** ದಿನಾಂಕ 16/12/2021 ರಂದು ಹಗರಿಬೊಮ್ಮನಹಳ್ಳಿ ಉಪ-ವಿಭಾಗದಲ್ಲಿ ಗ್ರಾಹಕರ ಸಂವಾದ ಸಭೆಯ ನಡವಳಿಯನ್ನು ಸಲ್ಲಿಸುತ್ತಿರುವ ಕುರಿತು.

ದಿನಾಂಕ 16/12/2021 ರಂದು ಬೆಳಗ್ಗೆ 11.00 ಗಂಟೆಗೆ ಗ್ರಾಹಕರ ಸಂವಾದ ಸಭೆಯನ್ನು ಹಗರಿಬೊಮ್ಮನಹಳ್ಳಿ ಉಪ-ವಿಭಾಗದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯಲ್ಲಿ ಭಾಗವಹಿಸಿದ ಉಪ-ವಿಭಾಗದ ಶಾಖಾಧಿಕಾರಿಗಳಿಗೆ ರೈತರು/ಸಾರ್ವಜನಿಕರಿಗೆ, ಗ್ರಾಹಕರಿಗೆ ಮತ್ತು ಸಿಬ್ಬಂದಿಯವರಿಗೆ ಸ್ವಾಗತವನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ), ಹಗರಿಬೊಮ್ಮನಹಳಿ ಕೋರಿದರು.

**<u>: ಗ್ರಾಹಕರ ಸಂವಾದ ಸಭೆಯ ನಡವಳಿಗಳು :</u>**

1) ಶ್ರೀ ದುರುಗಪ್ಪ ತಂದೆ ಚೆನ್ನಬಸಪ್ಪ ಚಿಮ್ಮನಹಳ್ಳಿ ಗ್ರಾಮದ ಇವರ ಹೊಲದಲ್ಲಿ ಸುಮಾರು ದಿನಗಳಿಂದ ಮುರಿದ ಕಂಬ ಬಿದ್ದಿರುವುದರಿಂದ ಇದನ್ನು ಬದಲಾವಣೆ ಮಾಡಬೇಕೆಂದು ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ. ಸ.ಕಾ.ನಿ.ಅ (ವಿ), ಹ. ಬೊ. ಹಳ್ಳಿ ರವರು ಮಾತನಾಡಿ, ಸದರಿ ವಿಷಯದ ಬಗ್ಗೆ ಕೋಗಳಿ ಶಾಖಾಧಿಕಾರಿವರಿಗೆ ಸದರಿ ವಿಷಯದ ಬಗ್ಗೆ ಸ್ಥಳವನ್ನು ಪರಿಶೀಲಿಸಿ ಮಾಡಿ ಕೂಡಲೇ ಕಂಪನಿಯ ನಿಯಮನುಸಾರವಾಗಿ ಅಂದಾಜು ಪಟ್ಟಿ ತಯಾರಿಸಿ ಈ ಸಮಸ್ಯೆಯನ್ನು ಸರಿಪಡಿಸಬೇಕೆಂದು ತಿಳಿಸಿದರು.

2) ಶ್ರೀ ಚೆನ್ನಬಸಪ್ಪ ತಂದೆ ಮೂಗಪ್ಪ ನಲ್ಕುದರಿ ಗ್ರಾಮದ ನಿವಾಸಿಯಾದ ಇವರ ಸ್ಥಾವರ ಸಂಖೆ UNNKIP16431 ಇವರ ಅಕ್ರಮ ಸಕ್ರಮದಲ್ಲಿ ವಿದ್ಯುತ್ ಪರವರ್ತಕ ಅಳವಡಿಸಬೇಕು ಎಂದು ಸಭೆಯಲ್ಲಿ ಈ ವಿಷಯ ತಿಳಿಸಿದರು. ಸ.ಕಾ.ನಿ.ಅ (ವಿ), ಹ. ಬೊ. ಹಳ್ಳಿ ರವರು ಮಾತನಾಡಿ, ಸದರಿ ವಿಷಯದ ಬಗ್ಗೆ ಕೋಗಳಿ ಶಾಖಾಧಿಕಾರಿವರಿಗೆ ಸದರಿ ವಿಷಯದ ಬಗ್ಗೆ ಕುಲಂಕುಶವಾಗಿ ಸ್ಥಳವನ್ನು ಪರಿಶೀಲಿಸಿ ಮಾಡಿ ಕೂಡಲೇ ಕಂಪನಿಯ ನಿಯಮನುಸಾರವಾಗಿ ಅಂದಾಜು ಪಟ್ಟಿ ತಯಾರಿಸಿ ಈ ಸಮಸ್ಯೆಯನ್ನು ಸರಿಪಡಿಸಬೇಕೆಂದು ತಿಳಿಸಿದರು.

3) ಶ್ರೀ ಭೀರಪ್ಪ ತಂದೆ ಹಾಲಪ್ಪ ಬನ್ನಿಕಲ್ಲು ಗ್ರಾಮ ಪಂಚಾಯತಿಯವರು ಹಲವಾರು ಬಾರಿ ಪತ್ರವನ್ನು ಸಲ್ಲಿಸಿದರು ವಿದ್ಯುತ್ ಕಂಬಗಳು ಬದಲಾವಣೆ ಮಾಡಲು ಸಲ್ಲಿಸಿದರು ಈ ಮೇಲಿನ ಗ್ರಾಹಕರು ದೂರು ಅನ್ವಯ SDP ಯೋಜನೆ ಅಡಿಯಲ್ಲಿ ವಿದ್ಯುತ್ ಕಂಬಗಳ ಅಂದಾಜು ಪಟ್ಟಿ ವಿಭಾಗ ಕಛೇರಿಗೆ ಈಗಾಗಲೇ ಸಲ್ಲಿಸಲಾಗಿದೆ. ಮತ್ತು ವಿಭಾಗ ಕಛೇರಿಗೆ ಕಾರ್ಯದೇಶ ಸಂಖ್ಯೆ ನೀಡಿದ ನಂತರ ಈ ಕೆಲಸ ನಿರ್ವಹಿಸಲಾಗುವುದು ಎಂದು ಸ.ಕಾ.ನಿ.ಅ (ವಿ), ಹ. ಬೊ. ಹಳ್ಳಿ ರವರು ಮಾತನಾಡಿ, ಸದರಿ ವಿಷಯದ ಬಗ್ಗೆ ಹಂಪಸಾಗರ ಶಾಖಾಧಿಕಾರಿವರಿಗೆ ಈ ಸಮಸ್ಯೆಯನ್ನು ಸರಿಪಡಿಸಬೇಕೆಂದು ತಿಳಿಸಿದರು

4) ಶ್ರೀ ಕೆ.ಎಮ್. ಕರಿಬಸಯ್ಯ ತಂದೆ ಕೊಟ್ರಗೌಡ ಮಾಲವಿ ಇವರು ಅಕ್ರಮ ಸಕ್ರಮ ಯೋಜನೆ ಅಡಿಯಲ್ಲಿ ಈ ಹಿಂದೆ ನೀಡಿದ 50/- ನೊಂದಾವಣೆ ಮಾಡಿ ಉಪ-ವಿಭಾಗ ಕಛೇರಿಯಲ್ಲಿ ಪಾವತಿಸಿರುತ್ತಾರೆ. **RR** ಸಂಖ್ಯೆ ನೀಡಿಲ್ಲವೆಂದು ದೂರು ಸಲ್ಲಿಸಿರುತ್ತಾರೆ. ಸ.ಕಾ.ನಿ.ಅ (ವಿ). ಹ. ಬೊ. ಹಳ್ಳಿ ರವರು ಮಾತನಾಡಿ. ಕಂಪನಿ ನಿಯಮಾನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು. ಹಾಗೂ ಸದರಿಯವರು ಹೊಸ IP SET ಗೆ **RR** ಸಂಖ್ಯೆ ನೀಡಲು ನಮಗೆ ಅವಕಾಶ ಇದೆ ಎಂದು ಕೋರಿರುತ್ತಾರೆ. ಆದರೆ ಹ.ಬೊ.ಹಳ್ಳಿ ಉಪ-ವಿಭಾಗದಲ್ಲಿ ಈ ಗ್ರೇ ಏರಿಯ ಇರುವುದರಿಂದ GIP ( Genaral IP SET) ಇರುವ ಕಾರಣ ನಮ್ಮ ಉಪ-ವಿಭಾಗದಲ್ಲಿ ಈ ಅವಕಾಶ ಇರುವುದಿಲ್ಲ ಎಂದು ಸ.ಕಾ.ನಿ.ಅ (ವಿ). ಹ. ಬೊ. ಹಳ್ಳಿ ರವರು ಮಾತನಾಡಿ ಮನವರಿಕೆ ಮಾಡಿದರು.

5) ಶಿವ ರೈಸ್ ಮಿಲ್ ಇವರ ಸ್ಥಾವರದ ಸಂಖ್ಯೆ HBHT-02 2019-20 ನೇ ಸಾಲಿನಲ್ಲಿ ಕೋವಿಡ್-19 ಅವಧಿಯಲ್ಲಿ MSME ಕೈಗಾರಿಕಾ ವಲಯ ಮತ್ತು ತರೆ ವರ್ಗದ ಗ್ರಾಹಕರ ಬೇಡಿಕೆ/ನಿಗಧಿತ ಶುಲ್ಕ ರಿಯಾತಿಯ ಹಣವನ್ನು ವಿಭಾಗೀಯ ಕಛೇರಿಯಿಂದ ಹಣ ಪಾವತಿಸಿಲ್ಲ ಎಂದು ಗ್ರಾಹಕರು ಈ ಸಭೆಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ. ಆದರೆ ಸ.ಕಾ.ನಿ.ಅ (ವಿ). ಹ. ಬೊ. ಹಳ್ಳಿ ರವರು ಮಾತನಾಡಿ ಇದರ ಮಾಹಿತಿಯನ್ನು ವಿಭಾಗ ಕಛೇರಿ ಮತ್ತು ನಿಗಮ ಕಛೇರಿಗೆ ಸಲ್ಲಿಸಿದ್ದು ಹಣ ಪಾವತಿಸಲು ಸಂಬಂಧಪಟ್ಟ ಕಛೇರಿಗೆ ಈ ವಿಷಯ ತಿಳಿಸಲಾಗುವುದು. ಸದರಿಯವರು ಸ್ಥಾವರದ ಸಂಖ್ಯೆ HBHT-02 ಸೋಲಾರ್ ನೊಂದಾಣಿಯಾಗಿದ್ದು ಕೆಲವು ದಾಖಲಾತಿಗಳು ಅಪೂರ್ಣವಾದ ನಕಲು ಮಾಹಿತಿಯ ಪ್ರತಿಗಳನ್ನು ಸಲ್ಲಿಸಿರುವುದರಿಂದ ಇದನ್ನು ಸಂಪಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು. ಸಭೆಯಲ್ಲಿ ಎಲ್ಲಾ ದಾಖಲಾತಿಗಳು ಸರಿಯಾಗಿ ಸಲ್ಲಿಸಲು ಗ್ರಾಹಕರಿಗೆ ಈ ವಿಷಯದ ಬಗ್ಗೆ ಸ.ಕಾ.ನಿ.ಅ (ವಿ). ಹ. ಬೊ. ಹಳ್ಳಿ ರವರು ವಿಷಯ ತಿಳಿಸಿದರು.

6) ಪದ್ಮಾವತಿ ರೈಸ್ ಮಿಲ್ ಇವರ ಸ್ಥಾವರದ ಸಂಖ್ಯೆ HBHT-01 2019-20 ನೇ ಸಾಲಿನಲ್ಲಿ ಕೋವಿಡ್-19 ಅವಧಿಯಲ್ಲಿ MSME ಕೈಗಾರಿಕಾ ವಲಯ ಮತ್ತು ತರೆ ವರ್ಗದ ಗ್ರಾಹಕರ ಬೇಡಿಕೆ/ನಿಗಧಿತ ಶುಲ್ಕ ರಿಯಾತಿಯ ಹಣವನ್ನು ವಿಭಾಗೀಯ ಕಛೇರಿಯಿಂದ ಹಣ ಪಾವತಿಸಿಲ್ಲ ಎಂದು ಗ್ರಾಹಕರು ಈ ಸಭೆಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ. ಆದರೆ ಸ.ಕಾ.ನಿ.ಅ (ವಿ), ಹ. ಬೊ. ಹಳ್ಳಿ ರವರು ಮಾತನಾಡಿ ಇದರ ಮಾಹಿತಿಯನ್ನು ವಿಭಾಗ ಕಛೇರಿ ಮತ್ತು ನಿಗಮ ಕಛೇರಿಗೆ ಸಲ್ಲಿಸಿದ್ದು ಹಣ ಪಾವತಿಸಲು ಸಂಬಂಧಪಟ್ಟ ಕಛೇರಿಗೆ ಈ ವಿಷಯ ತಿಳಿಸಲಾಗುವುದು.

ತಮ್ಮ ವಿಸ್ವಾಸಿ

ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ವಿ)
ಕಾರ್ಯ ಮತ್ತು ಪಾಲನಾ ಉಪ-ವಿಭಾಗ,
ಜೆಸ್ಕಾಂ, ಹಗರಿಬೊಮ್ಮನಹಳ್ಳಿ

**ಪ್ರತಿಯನ್ನು**

1) ಶಾಖಾಧಿಕಾರಿಗಳು(ವಿ) ಕಾರ್ಯ ಮತ್ತು ಪಾಲನಾ ಶಾಖೆ ಹ.ಬೊ.ಹಳ್ಳಿ/ ಹನಸಿ / ಯು.ಪಿ.ಹಳ್ಳಿ ಹಂಪಸಾಗರ/ ತಂಬ್ರಹಳ್ಳಿ / ಕೋಗಳಿ ರವರ ಮಾಹಿತಿಗಾಗಿ.
2) ಕಛೇರಿ ಕಡತಕ್ಕೆ.